806(805) ಶ್ರೀ ರಘುಪತಿ ಭಟ್.ಕೆ (ಉಡುಪಿ) ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯಲ್ಲಿ ಮಿತಿಗಿಂತ ಹೆಚ್ಚು ಭಾರದ ಅದಿರು ಲಾರಿಗಳ ಓಡಾಟದಿಂದ ಜಿಲ್ಲೆಯ ಪ್ರಮುಖ ಸೇತುವೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇತ್ತೀಚೆಗೆ ಸೇತುವೆಗಳ ಭದ್ರತೆಗಾಗಿ 'ವೇ ಬ್ರಿಡ್ಜ್ ' ನಿರ್ಮಿಸಲು ಸಾರ್ವಜನಿಕರಿಂದ ಹೋರಾಟ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಸೇತುವೆಯ ಭದ್ರತೆಯ ಪೂರಕವಾಗಿ ಒಂದು ಮ್ಯಾಂಗನೀಸ್ ಲಾರಿಯಲ್ಲಿ ಮಿತಿಗೊಳಿಸಲಾದ ಗರಿಷ್ಟ ಪ್ರಮಾಣದ ಮಿತಿ ಎಷ್ಟು;

ಉ) ಈಗಾಗಲೇ ನಾದುರಸ್ಥಿಯಲ್ಲಿರುವ ಬಾರ್ಕೂರು ಸೇತುವೆಯನ್ನು ಇನ್ನಷ್ಟು ಸಮಯದಲ್ಲಿ ಪುನರ್ ರಚಿಸಲಾಗುವುದು, ಇದಕ್ಕೆ ಮೀಸಲಾಗಿರಿಸಿದ ಹಣ ಎಷ್ಟು?

ಊ) ಅದಿರು ತುಂಬುವ ಪ್ರವೇಶ ದ್ವಾರದಲ್ಲಿಯೇ 'ವೇ ಬ್ರಿಡ್ಜ್ ' ನಿರ್ಮಿಸಿ ಅಧಿಕ ಭಾರವನ್ನು ಲಾರಿಗಳಿಗೆ ಹೇರದಂತೆ ತಡೆಯುವ ಯೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಉಡುಪಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಎಲ್ಲಾ ರಸ್ತೆಗಳಲ್ಲಿ ಅಧಿಕ ಭಾರದ ಅದಿರು ತುಂಬಿದ ಲಾರಿಗಳ ಸಂಚಾರವನ್ನು ನಿಷೇಧಿಸಲಾಗಿದ್ದು, ಶಾಶ್ವತವಾದ ಪರಿಹಾರವನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ.

ಈ) ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿ, ರಸ್ತೆಗಳ ಹಾಗೂ ಸೇತುವೆಗಳ ಧಾರಣ ಸಾಮರ್ಥ್ಯಕ್ಕನುಗುಣವಾಗಿ 2 ಆಕ್ಸೆಲ್ಡ್ ವಾಹನಗಳಿಗೆ ಗರಿಷ್ಟ 15.2 ಟನ್ ಹಾಗೂ ಎರಡಕ್ಕಿಂತ ಹೆಚ್ಚು ಆಕ್ಸೆಲ್ಡ್ ವಾಹನಗಳಿಗೆ ಗರಿಷ್ಟ 19.00 ಟನ್ ಮತ್ತು ಮೂರು ಆಕ್ಸೆಲ್ ವಾಹನಗಳಿಗೆ 24.00 ಟನ್ ಭಾರ ಮಿತಿ ನಿಗದಿಗೊಳಿಸಲಾಗಿದೆ.

ಉ) ಬಾರ್ಕೂರು ಸೇತುವೆ ದುರಸ್ತಿಗಾಗಿ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆಗಳು (ಯೋಜನೆ) ಯಡಿ ರೂ. 100.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಕರೆಯಲಾಗಿದೆ. ಮೈಸೂರ್ ಟಾರ್‌ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಬೆಂಗಳೂರು ಅವರು ತಾಂತ್ರಿಕವಾಗಿ ಪರಿಶೀಲಿಸಿ ನೀಡಿದ ವಿನ್ಯಾಸದಂತೆ ತಯಾರಿಸಲಾದ ರೂ. 360.00 ಲಕ್ಷದ ಅಂದಾಜು ಪಟ್ಟಿ ತಯಾರಿಸಲಾಗಿದೆ. ಸದ್ಯದಲ್ಲಿ ಟೆಂಡರ್ ಮೂಲಕ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಊ) 'ವೇ ಬ್ರಿಡ್ಜ್' ನಿರ್ಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.